ನಿಮ್ಮೊಡನೆ

ನವರಾತ್ರಿಯ ಸಂಧರ್ಭದಲ್ಲಿ ನವವರ್ಣಗಳಲ್ಲಿ ಮಿಂಚುವವರು ಆ ಬಣ್ಣಗಳೆಲ್ಲವೂ ತಮ್ಮದೇ ಪಾತ್ರ ಎಂಬುದು ಮರೆಯುತ್ತಾರೆ. ಮಾಧ್ಯಮದಲ್ಲಿಯೂ ಬಾಹ್ಯ ಸೌಂದರ್ಯಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಟೀವಿ, ಒಟಿಟಿಗಳಲ್ಲಿಯಂತೂ ಈ ಕಾಲದ ಮಹಿಳೆಯರಿಗೂ ಅವರು ತೋರುವ ಮಹಿಳೆಯರಿಗೂ ಅಜಗಜಾಂತರ ವ್ಯತ್ಯಾಸವಿದೆ. ಒಂದು ಉತ್ಪನ್ನದಂತೆ, ಮಾರಾಟದ ಸರಕಿನಂತೆ ಚಿತ್ರಿಸುವುದೂ ಪುರುಷಪ್ರಧಾನ ವ್ಯವಸ್ಥೆಯ ಹುನ್ನಾರವೇ ಆಗಿದೆ.



ವಿಜಯ

# ವ್ಯತಿರಿಕ್ತ ಚಿತ್ರಣ ಕೈಬಿಡಿ

ನಾಲ್ಕು ದಶಕಗಳ ಹಿಂದಿನ ಮಾತಿದು. ದೂರದರ್ಶನದಲ್ಲಿ ಕವಿತಾ ಚೌಧರಿ ನಟಿಸಿದ ಉಡಾನ್ ಎಂಬ ಧಾರಾವಾಹಿ ಬರುತ್ತಿತ್ತು. ಅದು ಆ ಕಾಲದ ಪೋಷಕರಲ್ಲಿ ತಮ್ಮ ಹೆಣ್ಣುಮಕ್ಕಳನ್ನೆಲ್ಲ ಪೊಲೀಸ್ ಅಧಿಕಾರಿಯಾಗಿಸುವ ಕನಸು ಬಿತ್ತಿತ್ತು. 'ಚುನೌತಿ' ಎಂಬ ಧಾರಾವಾಹಿ ಮಾದಕದ್ರವ್ಯಗಳ ವ್ಯಸನದ ಪರಿಣಾಮ ಮತ್ತು ಅದನ್ನು ಮೀರುವ ಕತೆ ಹೇಳುತ್ತಿತ್ತು.

ಇದೀಗ ಈ ಕಾಲದ ಧಾರಾವಾಹಿಗಳನ್ನು ನೋಡಣ. ಮಹಿಳೆಯರು ಒಂದೋ ಸಾಧು ಹಸುವಿನಂತೆ, ಮನೆ ಪೂಜೆ ಮಾಡಿಕೊಂಡು, ಪಾದ ಸೇವೆ ಮಾಡಿಕೊಂಡು, ಗಂಡ ಇನ್ನೊಬ್ಬರನ್ನು ಬಯಸಿದರೆ ಅದನ್ನೂ ತನ್ನ ವಿಧಿ ಎಂದುಕೊಂಡಿರಬೇಕು. ಇನ್ನೊಂದು ಅಂಚಿನಲ್ಲಿ ಮತ್ತೊಬ್ಬರ ಪತಿಯನ್ನು ಮೆಚ್ಚಿಸಲು, ಅವರೊಡನೆ ಸಮಯ ಕಳೆಯಲು, ಇನ್ನೊಬ್ಬರನ್ನು ಆಟದ ಟ್ರೋಫಿ ಎಂಬಂತೆ ಗೆಲ್ಲಲು ಸಂಚು ಹೂಡುವುದು, ಹುನ್ನಾರ ಮಾಡುವುದು, ಹೊಡೆಸುವುದು, ಬಡಿಸುವುದು ಎಲ್ಲವನ್ನೂ ತೋರುತ್ತಿದ್ದಾರೆ.

ಇಡೀ ಕನ್ನಡದ ಧಾರಾವಾಹಿಗಳು ಒಂದೋ ಮನುಷ್ಯನ ಪರಮಗುರಿ ಮದುವೆಯಾಗಿ ಮಕ್ಕಳನ್ನು ಮಾಡಿಕೊಳ್ಳುವುದು, ಇಲ್ಲವೇ ಮದುವೆಯಾಗುವಾಗಿನ ಗೊಂದಲಗಳು ಇಂಥವುಗಳ ಸುತ್ತಲೇ ಗಿರಕಿ ಹೊಡೆಯುತ್ತಿವೆ. ಧಾರಾವಾಹಿ ಲೋಕದ ಬುದ್ಧಿಜೀವಿಗಳು ಕಣ್ತೆರೆದು ತಮ್ಮ ಸುತ್ತಲಿನ ಸಮಾಜವನ್ನೊಮ್ಮೆ ನೋಡಬಾರದೆ? ಮಹಿಳೆಯರೀಗ ತಮ್ಮ ವ್ಯಕ್ತಿತ್ವ, ತಮ್ಮ ಖುಷಿಯತ್ತ ಹೆಚ್ಚು ಗಮನ ನೀಡುತ್ತಿದ್ದಾರೆ. ಮದುವೆ ಅಗತ್ಯವೇ, ಅನಿವಾರ್ಯವೇ ಎಂಬ ಚರ್ಚೆಗೂ ಬಾರದೆ ತಮ್ಮ ನಿಲುವು ಮತ್ತು ನಿರ್ಧಾರವನ್ನು ಸಂಭ್ರಮಿಸುತ್ತಿದ್ದಾರೆ. ತಮ್ಮ ವಿದ್ಯಾಭ್ಯಾಸ, ತಮ್ಮ ಕೆರಿಯರ್‌ಗಳಿಗೆ ಆದ್ಯತೆ ನೀಡುತ್ತಾರೆ. ಮದುವೆಯೆಂಬುದೇ ಆಯ್ಕೆಯಾಗಿರುವ ಕಾಲಮಾನದಲ್ಲಿ ನಾವಿದ್ದೇವೆ.

ಈಗಲೂ ಈ ಹುಡುಗಿಯನ್ನು ಮದುವೆಯಾಗಿ ಬಾಳು ಕೊಡು ಎಂಬಂಥ ಸಂಭಾಷಣೆಗಳನ್ನು ಬರೆಯುತ್ತಿದ್ದಾರೆ? ಹೆಣ್ಣುಮಕ್ಕಳನ್ನು ಮಂಥರೆಯಂತೆ, ತಾಟಕಿಯಂತೆ ತೋರುತ್ತಿರುವವರಿದ್ದಾರೆ? ಅವರು ಚಿತ್ರಿಸುವ ಪುರುಷ ಪಾತ್ರಗಳನ್ನು ಒಮ್ಮೆ ನೋಡಿ, ಸಂದರ್ಭ, ಸಂದಿಗ್ಧಗಳಿಗೆ ಸಿಲುಕಿದಂತೆ, ಅಮಾಯಕರಂತೆ ಹಾಗೂ ಅವರೇನೆ ಮಾಡಿದರೂ ಅದು ಸ್ವೀಕೃತ ಎಂಬ ಧ್ವನಿಯಲ್ಲಿ ಕತೆಗಳನ್ನು ಮುಂದುವರಿಸಲಾಗುತ್ತಿದೆ.

ನಮ್ಮ ಮನೆಯ ಮಕ್ಕಳ ಕಂಗಳಲ್ಲಿ ಕನಸು ತುಂಬುವುದು ಬಿಟ್ಟು, ನಾವೂ ಆ ಧಾರಾವಾಹಿಗಳಲ್ಲಿ ಕಳೆದೇ ಹೋದರೆ, ಮುಂದೆ ತಪ್ಪೆನಿಸಿದ್ದೆಲ್ಲವೂ ಸಹಜವಾಗುವ ಕಾಲ ಬರಬಹುದು. ಗ್ರಾಮೀಣ ಪ್ರದೇಶಗಳಲ್ಲಿಯೂ, ನಗರದಲ್ಲಿಯೂ ಈಗಾಗಲೇ ಸದ್ದಿಲ್ಲದೆ ಉತ್ತರ ಭಾರತೀಯ ಸಾಂಸ್ಕೃತಿಕ ಹೇರಿಕೆಯಾಗಿದೆ. ಮದುವೆಗಳಲ್ಲಿ ಮೆಹೆಂದಿ ಮತ್ತು ಸಂಗೀತ್‌ಗಳು ನಮ್ಮ ಕರ್ನಾಟಕದ ಇದಿರುಗೊಳ್ಳುವ ಪರಂಪರೆಯನ್ನು ನೇಪಥ್ಯಕ್ಕೆ ಸರಿಸಿದೆ. ಊಟದ ಮೇಜಿನ ಮೇಲೆಯೂ ನಮ್ಮ ನೆಲದ ಊಟ ತಿಂಡಿಗಳು ತಮ್ಮ ಇರುವನ್ನು ಕಳೆದುಕೊಂಡಿವೆ. ಇವೆಲ್ಲ ನಿಧಾನವಾಗಿ ಆಗುತ್ತಿರುವ ಬದಲಾವಣೆಗಳು.

ಮಹಿಳೆಯರ ಪಾತ್ರ ಚಿತ್ರಣಗಳಲ್ಲಿ ಬದಲಾವಣೆ ತರದಿದ್ದಲ್ಲಿ ಸ್ವಾಭಿಮಾನಿ, ಸ್ವಾವಲಂಬಿ, ಮಹತ್ವಾಕಾಂಕ್ಷಿ ಮಹಿಳೆಯರೆಲ್ಲ ನೆಗೆಟಿವ್ ಪಾತ್ರಗಳಂತೆಯೇ ಕಾಣಬಹುದು. ಶೋಷಣೆಗೆ ಒಳಗಾದ, ವಂಚನೆಗೆ ಒಳಗಾದ ಮಹಿಳೆಯರು ಎಲ್ಲವನ್ನೂ ಸಹಿಸಿಕೊಂಡಿದ್ದರೆ ಅದನ್ನೇ ಸಭ್ಯತೆಯ ಸ್ವರೂಪವೆಂದು ನಂಬುವ ಕಾಲ ಬರಬಹುದು.

ಕಾಲ ಬದಲಾಗಿದೆ. ಹೆಣ್ಣು ಗಂಡಿನ ಪಾತ್ರಗಳ ಕಾರ್ಯಗಳೂ ಬದಲಾಗಿವೆ. ಧಾರಾವಾಹಿಗಳು ಸದಾ ನಮ್ಮ ಬದುಕಿನ ಸುತ್ತ ಹಾಗೂ ಸಮೀಪವಿರಬೇಕು. ಸೃಜನಶೀಲ ಮನಸುಗಳಾದರೆ ವೈಜ್ಞಾನಿಕ ಧಾರಾವಾಹಿಗಳನ್ನು ನಿರ್ಮಿಸಲಿ, ಕಾಲ್ಪನಿಕ ಶಕ್ತಿಗೆ ತುಸು ಕಸುವು ತಂದುಕೊಳ್ಳಲಿ. ಸೃಜನಶೀಲ ಮತ್ತು ಕಾಲ್ಪನಿಕ ಪಾತ್ರಗಳ ಹೆಸರಿನಲ್ಲಿ ಮೌಢ್ಯವನ್ನು ಬಿತ್ತದಿರಲಿ. ದೆವ್ವ, ದೈವ ಎರಡಕ್ಕೂ ಹೆಚ್ಚಿನ ಮಹತ್ವ ಸಿಗದಿರಲಿ.

ಮಹಿಳೆಯರ ಭಾವನಾತ್ಮಕ ಎಳೆಯನ್ನು ಇರಿಸಿಕೊಂಡು ತಮ್ಮ ಲಾಭವನ್ನು ಮಾಡಿಕೊಳ್ಳುವುದೇ ನಿಜವಾದರೆ, ಮಹಿಳೆಯರಲ್ಲಿ ಹೊಸ ಕನಸು ತುಂಬುವ, ಮಹತ್ವಾಕಾಂಕ್ಷೆ ತರುವ, ಸ್ವಾವಲಂಬಿಯಾಗಿಸುವ, ಸಶಕ್ತ ಮತ್ತು ಘನತೆಯಿಂದ ಬಾಳಬಹುದಾದ ಮಹಿಳಾ ಪಾತ್ರಲೋಕಗಳನ್ನು ಸೃಜಿಸಲಿ. ಈ ವ್ಯತಿರಕ್ತದ ಚಿತ್ರಣವನ್ನು ಕೈಬಿಡಲಿ.

■ ರಶ್ಮಿ ಎಸ್